ಆರ್.ಆರ್.ಜನ್ನು, ಭಾ.ಆ.ಸೇ
ನಿರ್ದೇಶಕರು
ಮಹಿಳೆಯರ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ
DIRECTOR OF WOMEN AND
CHILD DEVELOPMENT IN
KARNATAKA

ಒಂದನೇ ಮಹಡಿ
ಬಹುಮಹಡಿಗಳ ಕಟ್ಟಡ
ಡಾ॥ ಅಂಬೇಡ್ಕರ್ ರಸ್ತೆ
ಬೆಂಗಳೂರು – ೫೬೦ ೦೦೧
I FLOOR
MULTISTORIED BUILDING
DR. B.R. AMBEDKAR VEEDHI
BANGALORE - 560 001


ಅ.ಸ ಪತ್ರ ಸಂಖ್ಯೆ:ಮಮಅಇ/ಬಾವಿನಿಕೋ/ವಿ.ಕ್ರ/10/2014-15

ದಿನಾಂಕ:19-06-2014.

ಸನ್ಮಾನ್ಯರೇ,

ವಿಷಯ:- ಬಾಲ್ಯ ವಿವಾಹ ನಿಷೇಧ ಕುರಿತು ಜಿಲ್ಲೆಯ ಎಲ್ಲಾ ಮುದ್ರಣ ಸಂಸ್ಥೆ (ಪ್ರಿಂಟಿಂಗ್ ಪ್ರೆಸ್)ಗಳ, ವ್ಯವಸ್ಥಾಪಕರುಗಳಿಗೆ ಮತ್ತು ಜಿಲ್ಲೆಯ ಎಲ್ಲಾ ಧಾರ್ಮಿಕ ಪೌರೋಹಿತ್ಯ ಮದುವೆ ಕಾರ್ಯ ನಡೆಸುವ ಪೂಜಾರಿಗಳು, ಮಠ/ ಕಲ್ಯಾಣ ಮಂಟಪ/ ಫಂಕ್ಷನ್‌ಹಾಲ್‌ಗಳ ವ್ಯವಸ್ಥಾಪಕರುಗಳಿಗೆ, ಸಾಮೂಹಿಕ ವಿವಾಹ ಆಯೋಜಕರಿಗೆ ವಿಶೇಷ ಸೂಚನಾಪತ್ರ ಹೊರಡಿಸುವಂತೆ ಕೋರಿ.

ಉಲ್ಲೇಖ: 1. ಭಾರತ ಸರ್ಕಾರದ ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ರ ಪ್ರಕಾರ.
2. ಭಾರತ ಸರ್ವೋಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಡಾ॥ ಶಿವರಾಜ್ ಪಾಟೀಲ್ ರವರು ದಿನಾಂಕ:30-06-2014 ರಂದು ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಹೈಕೋರ್ಟ್‌ಗೆ ಸಲ್ಲಿಸಿದ ಕೋರ್ ಕಮಿಟಿಯ ವರದಿಯಂತೆ.

ಬಾಲ್ಯ ವಿವಾಹವು ಅಭಿವೃದ್ಧಿಗೆ ಮಾರಕವಾಗಿರುವ ಸಮಸ್ಯೆಯಾಗಿದ್ದು, ಇದರಿಂದ ಮಕ್ಕಳ ಭವಿಷ್ಯಕ್ಕೆ, ಹಕ್ಕುಗಳಿಗೆ ದಕ್ಕೆಯುಂಟಾಗಿ ಉಲ್ಲಂಘನೆಗೆ ಒಳಗಾಗಿ ಬದುಕುವ ಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಕ್ರೂರ ಪದ್ಧತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಮತ್ತು ಜನಸಾಮಾನ್ಯರಲ್ಲಿ ಬಾಲ್ಯವಿವಾಹದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸುತ್ತಿದೆ. ಆದರೂ ಸಹ ಬಾಲ್ಯ ವಿವಾಹಗಳ ಅನೇಕ ಪ್ರಕರಣಗಳು ವರದಿಯಾಗುತ್ತಿದ್ದು, ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯವಾಗಿರುತ್ತದೆ.

ರಾಯಚೂರು ಜಿಲ್ಲಾಡಳಿತವು ಜಿಲ್ಲೆಯ ಎಲ್ಲಾ ಮುದ್ರಣ ಸಂಸ್ಥೆ(ಪ್ರಿಂಟಿಂಗ್ ಪ್ರೆಸ್)ಗಳ, ಅಂಗಡಿಗಳ ಹಾಗೂ ಡಿಟಿಪಿ ಅಂಗಡಿಗಳ ವ್ಯವಸ್ಥಾಪಕರುಗಳಿಗೆ ಮದುವೆ ಆಮಂತ್ರಣ ಪತ್ರ ಮುದ್ರಿಸುವಾಗ ವಧು, ವರರ ವಯಸ್ಸಿನ ದೃಢೀಕರಣ ಪತ್ರ ಪಡೆದು ವಧುವಿಗೆ 18 ವರ್ಷ, ವರನಿಗೆ 21 ವರ್ಷ, ಪೂರ್ಣವಾಗಿದೆ ಎಂದು ಖಾತ್ರಿಪಡಿಸಿಕೊಂಡ ನಂತರವೇ ಆಮಂತ್ರಣ ಪತ್ರಿಕೆ ಮುದ್ರಿಸುವ ಬಗ್ಗೆ ವಿಶೇಷ ಸೂಚನಾ ಪತ್ರ ಹೊರಡಿಸಿದ್ದು, ಇದರಿಂದ ಅನೇಕ ಬಾಲ್ಯ ವಿವಾಹಗಳನ್ನು ಪ್ರಾರಂಭಿಕ ಹಂತದಲ್ಲೇ ತಡೆಗಟ್ಟಲು ಅನುಕೂಲವಾಗಿದೆ. ಮುಂದುವರೆದು ರಾಯಚೂರು ಜಿಲ್ಲಾಡಳಿತವು ಜಿಲ್ಲೆಯ ಎಲ್ಲಾ ಧಾರ್ಮಿಕ ಪೌರೋಹಿತ್ಯ ಮದುವೆ ಕಾರ್ಯ, ಮಾಂಗಲ್ಯ, ಧಾರಣೆ ಕಾರ್ಯಕ್ರಮ ನಡೆಸುವಾಗ ವಧು ವರರ ವಯಸ್ಸನ್ನು ಖಾತ್ರಿಪಡಿಸಿ ಬಾಲ್ಯ ವಿವಾಹಕ್ಕೆ ಯಾವುದೇ ಅವಕಾಶ ನೀಡದಂತೆ ಜಿಲ್ಲೆಯ ಎಲ್ಲಾ ಪೂಜಾರಿಗಳಿಗೆ ವಿಶೇಷ ಸೂಚನಾ ಪತ್ರ ಹೊರಡಿಸಿದ್ದು, ಇದರಿಂದಲೂ ಸಹ ಅನೇಕ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಅನುಕೂಲವಾಗಿದೆ. ರಾಯಚೂರು ಜಿಲ್ಲಾಡಳಿತದ ಮಾದರಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಈ ರೀತಿ ಸೂಚನಾ ಪತ್ರಗಳನ್ನು ಹೊರಡಿಸಿದ್ದಲ್ಲಿ, ಬಾಲ್ಯ ವಿವಾಹಗಳನ್ನು ಪರಿಣಾಮಕಾರಿಯಾಗಿ ತಡೆಯಬಹುದೆಂದು ಭಾವಿಸಿದ್ದು, ಈ ಪತ್ರಕ್ಕೆ ಲಗತ್ತಿಸಿರುವ ಮಾದರಿಯಲ್ಲಿ ವಿಶೇಷ ಸೂಚನಾ ಪತ್ರಗಳನ್ನು ಜಿಲ್ಲೆಯ ಎಲ್ಲಾ ಮುದ್ರಣ ಸಂಸ್ಥೆ(ಪ್ರಿಂಟಿಂಗ್ ಪ್ರೆಸ್)ಗಳ, ಅಂಗಡಿಗಳ ಹಾಗೂ ಡಿಟಿಪಿ ಅಂಗಡಿಗಳ ವ್ಯವಸ್ಥಾಪಕರುಗಳಿಗೆ ಮತ್ತು ಮದುವೆಗಳನ್ನು ನಡೆಸುವ ದೇವಸ್ಥಾನದ ಪೂಜಾರಿಗಳು, ಮಠ/ಚರ್ಚ್/ಮಸೀದಿಗಳ ಧಾರ್ಮಿಕ ಮುಖಂಡರು, ಕಲ್ಯಾಣ ಮಂಟಪ/ಫಂಕ್ಷನ್‌ಹಾಲ್‌ಗಳ ವ್ಯವಸ್ಥಾಪಕರುಗಳಿಗೆ ಮತ್ತು ಸಾಮೂಹಿಕ ವಿವಾಹಗಳ ಆಯೋಜಕರಿಗೆ ಯಾವುದೇ ಬಾಲ್ಯ ವಿವಾಹಗಳಿಗೆ ಅವಕಾಶ ಮಾಡಿಕೊಡದಂತೆ ವಿಶೇಷ ಸೂಚನಾಪತ್ರ ಹೊರಡಿಸಲು ಹಾಗೂ ಈ ಮೂಲಕ ಬಾಲ್ಯ ವಿವಾಹಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಇಲಾಖೆಗೆ ಸಹಕಾರ ನೀಡಲು ಕೋರಲಾಗಿದೆ.

ತಮ್ಮ